**ದಿನಾಂಕ 19-01-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ.ಎ.ಎ.ಎಮ್ ವಕೀಲರಿಂದ ಪ್ರತಿವಾದಿ-5 ರಿಂದ 7 ಮತ್ತು 17 ಪರವಾಗಿ**

1.ನಮ್ಮ ತಂದೆಯವರು ತೀರಿಕೊಂಡು 25 ವರ್ಷಗಳಾಯಿತು. ನನ್ನ ತಂದೆ ಜೀವಿತಾವಧಿಯಲ್ಲಿ ಅವರ ಹೆಸರಿನಲ್ಲಿ 3 ಏಕರೆ ಆಸ್ತಿ ನಾಗರಾಳದಲ್ಲಿ ಇದ್ದು, ಅದರ ಸರ್ವೆ ನಂ.178 ಆಗಿರುತ್ತದೆ. ಆ ರೀತಿ 3 ಏಕರೆ ಆಸ್ತಿ ಇತ್ತು ಎಂದು ತೋರಿಸಲು ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ಯಾವ ದಾಖಲಾತಿ ಹಾಜರಪಡಿಸಿದ್ದೀರಿ ಎಂದರೆ ಸಾಕ್ಷಿಯು ನನಗೆ ಓದಲು - ಬರೆಯಲು ಬರುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆಯವರು ತೀರಿಕೊಂಡ ನಂತರ ಯಾರ ಹೆಸರಿಗೆ ಸದರಿ ಆಸ್ತಿ ಬಂದಿತು ಎಂದರೆ ಸಾಕ್ಷಿಯು ನನ್ನ ತಂದೆಯ ಜೀವಿತಾವಧಿಯಲ್ಲಿ ನನ್ನ ತಾಯಿಯ ಹೆಸರಿಗೆ ಸದರಿ ಆಸ್ತಿ ಬಂದಿತು ಎಂದು ಹೇಳುತ್ತಾರೆ. ನನ್ನ ತಂದೆ ತೀರಿಕೊಳ್ಳುವ ಸಮಯದಲ್ಲಿ ಅವರ ಹೆಸರಿನಲ್ಲಿ ಯಾವ ಆಸ್ತಿ ಇರುವುದಿಲ್ಲ. ನಿಮ್ಮ ತಾಯಿ ಹೆಸರಿಗೆ ಆಸ್ತಿ ಹೇಗೆ ಬಂದಿತು ಎಂದರೆ ಸಾಕ್ಷಿಯು ನನ್ನ ತಂದೆಯ ಸಹೋದರಿ ರಂಗವ್ವ ಇವರು ವಿಭಾಗ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಊರ ಹಿರಿಯರ ನಿರ್ದೇಶನದಂತೆ ಆಸ್ತಿ ನನ್ನ ತಾಯಿಯ ಹೆಸರಿಗೆ ಬಂದಿದೆ ಎಂದು ಹೇಳುತ್ತಾರೆ. ಅದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ನೀವು ಮೇಲೆ ಹೇಳಿದ ವಿಷಯ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಹೇಳುತ್ತಾರೆ.

2.ನನ್ನ ಪ್ರಕಾರ ನನ್ನ ತಂದೆಯಿಂದ ನನ್ನ ತಾಯಿಯ ಹೆಸರಿಗೆ ಬಂದ ಆಸ್ತಿಯ ಆದಾಯದಿಂದ ಇನ್ನೂ 2 ಆಸ್ತಿಗಳನ್ನು ಖರೀದಿಸಿದ್ದಾರೆ. ಅವುಗಳ ಸರ್ವೆ ನಂಬರ ಕ್ಷೇತ್ರ ನನಗೆ ಗೊತ್ತಿಲ್ಲ. ಆದರೆ ಅವುಗಳು ನಾಗರಾಳ ಗ್ರಾಮದಲ್ಲಿ ಇವೆ. ಯಾರಿಂದ ಸದರಿ ಆಸ್ತಿಗಳನ್ನು ಖರೀದಿಸಿದರು ಎಂದರೆ ಬಡಿಗೇರ ಎನ್ನುವವರಿಂದ ಸದರಿ ಆಸ್ತಿಗಳನ್ನು ಖರೀದಿಸಿದ್ದು, ಆ ರೀತಿ ಖರೀದಿಸಿ 10 ರಿಂದ 11 ವರ್ಷಗಳಾಗಿವೆ. ಇನ್ನೊಂದು ಆಸ್ತಿಯನ್ನು ಕುರುಬರ ಎನ್ನುವವರ ಕಡೆಯಿಂದ ಖರೀದಿಸಿದ್ದು ಸದರಿ ಆಸ್ತಿ ಖರೀದಿಸಿ 15 ವರ್ಷಗಳಾಯಿತು. ಸದರಿ ಆಸ್ತಿಗಳನ್ನು ನನ್ನ ಅಣ್ಣ ಹಣಮಂತ ಅವರ ಹೆಸರಿನಲ್ಲಿ ಖರೀದಿಸಲಾಯಿತು. ಅದಕ್ಕೆ ಸಂಬಂಧಿಸಿದ ಕ್ರಯದಸ್ತು ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ಸದರಿ 3 ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವ ಆಸ್ತಿ ಇವೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಅಣ್ಣ ಖರೀದಿಸಿದ ಆಸ್ತಿಯ ಕ್ಷೇತ್ರ ಹೇಳಬಹುದಾ ಎಂದರೆ ಪ್ರತ್ಯೇಕವಾಗಿ ಹೇಳಲು ಆಗುವುದಿಲ್ಲ ಒಟ್ಟು 6 ಏಕರೆ ಇದೆ ಎಂದು ಹೇಳುತ್ತಾರೆ. ಈಗ ಸದರಿ ಆಸ್ತಿಗಳು ಯಾರ ಹೆಸರಿನಲ್ಲಿ ಇವೆ ಎಂದರೆ ಸಿದ್ದಪ್ಪ ಅವರ ಹೆಂಡತಿ-ಮಕ್ಕಳ

ಹೆಸರಿನಲ್ಲಿ 1 ಏಕರೆ 20 ಗುಂಟೆ ಆಸ್ತಿ ಇದೆ. ಅದನ್ನು 7 ವರ್ಷದ ಹಿಂದೆ ಅವರ ಹೆಸರಿಗೆ ಮಾಡಿದ್ದು ಯಾವುದೇ ದಾಖಲಾತಿ ಮಾಡಿಲ್ಲ. ಹಣಮಂತ ಅವರ ಹೆಸರಿನಲ್ಲಿ 3 ಏಕರೆ ಆಸ್ತಿ ಇವತ್ತಿಗೆ ಇದೆ. ಅದನ್ನು ತಾನೇ ಸ್ವಂತ ಖರೀದಿಸಿದ್ದಾನೆ ಎಂದು ಮಾಡಿಕೊಂಡಿದ್ದಾನೆ. ಹಣಮಂತ ಅವರ ಸ್ವಂತ ದುಡಿಮೆ ಇತ್ತಾ ಎಂದರೆ ವ್ಯವಸಾಯದ ಜಮೀನಿನಿಂದ ಬಂದ ಆದಾಯ ಎಂದು ಹೇಳುತ್ತಾರೆ. ಬೇರೆಯವರ ಹೊಲದಲ್ಲಿ ಕೃಷಿ ಮಾಡುತ್ತಿದ್ದನಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಶಂಕ್ರೆಪ್ಪ ಅವರಿಗೆ 1 ಏಕರೆ 20 ಗುಂಟೆ ಆಸ್ತಿ ಬಂದಿರುತ್ತದೆ. ನನ್ನ ಕುಟುಂಬದ ವಿವರ ಹೊರತುಪಡಿಸಿ ಉಳಿದ ಪ್ರತಿವಾದಿಗಳ ಹೆಸರು ನನಗೆ ಗೊತ್ತಿಲ್ಲ.

3.ದಾವಾ ಸಲ್ಲಿಸುವಾಗ ಪ್ರತಿವಾದಿಗಳ ಮಾಹಿತಿ ಯರು ನೀಡಿದರು ಎಂದರೆ ನಾನೇ ನೀಡಿದ್ದು, ಈಗ ನೆನಪಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ-7 ರಿಂದ ಪ್ರತಿವಾದಿ-19 ಗಳ ಹೆಸರಿನಲ್ಲಿ ಯಾವ ಯಾವ ಆಸ್ತಿಗಳು ಇವೆ ಎಂದರೆ ಸಾಕ್ಷಿಯು ನಾಗರಾಳ ಗ್ರಾಮದಲ್ಲಿ ಒಂದು ಆಸ್ತಿಯಲ್ಲಿ ಅವರಿಗೆ ಹಕ್ಕು ಇದ್ದು ಪ್ರತಿಯೊಬ್ಬರಿಗೆ 2 ಗುಂಟೆ ಆಸ್ತಿ ಇದೆ. ಯಾವ ವರ್ಷದಲ್ಲಿ ಆ ರೀತಿ ದಾಖಲಾತಿ ಬರೆದು ನೀಡಲಾಯಿತು ಎಂದರೆ 10 ವರ್ಷದ ಹಿಂದೆ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿ ಗುಂಟೆಗೆ ಮೊದಲು 60 ಸಾವಿರದಂತೆ ಮಾರಾಟ ಮಾಡಿ ಈಗ 2 ರಿಂದ 3 ಲಕ್ಷ ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ದಾಖಲಾತಿ ಹಾಜರಪಡಿಸಿದ್ದೇನೆ. ನಿಮ್ಮ ತಾಯಿಯ ಹೆಸರಿನಲ್ಲಿ ಇದ್ದ ಆಸ್ತಿ ಈಗ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಹಣಮಂತ ಮತ್ತು ಶಂಕ್ರೆಪ್ಪ ಆಸ್ತಿ ಹಂಚಿಕೊಂಡಿದ್ದು ಸಿದ್ದಪ್ಪ ಇವರಿಗೆ ಹಣ ನೀಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಾಯಿಗೆ ಯಾವುದೇ ನೀಡಿಲ್ಲ. ಸುಮಾರು 20 ವರ್ಷಗಳ ಹಿಂದೆ ಸದರಿ ದಾಖಲಾತಿ ಮಾಡಿದ್ದು, ಯಾವ ದಾಖಲಾತಿ ಎಂದು ನನಗೆ ಗೊತ್ತಿಲ್ಲ. ಆ ರೀತಿ ದಾಖಲಾತಿ ಮಾಡಿಕೊಂಡಿದ್ದಾರೆ ಎಂದು ನಿಮಗೆ ಯಾರು ಹೇಳಿದರು ಎಂದರೆ ನನ್ನ ಮುಂದೆಯೇ ಸದರಿ ದಾಖಲಾತಿ ಮನೆಯಲ್ಲಿ ಮಾಡಿಕೊಂಡರು ಎಂದು ಹೇಳುತ್ತಾರೆ. ಆಗ ನಾನು ಯಾವುದೇ ತಕರಾರು ಸಲ್ಲಿಸಿಲ್ಲ. ಆಗ ನಾನು ಆಸ್ತಿ ಬೇಡ ಎಂದು ಅವರು ನನ್ನೊಂದಿಗೆ ಒಳ್ಳೆಯ ಸಂಬಂಧ ಹೊಂದಿದ್ದರಿಂದ ಹೇಳಿದ್ದೆನು. ಯಾವ ಕಾರಣಕ್ಕಾಗಿ ಈಗ ದಾವೆ ಸಲ್ಲಿಸಿದ್ದೀರಿ ಎಂದರೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳದ ಕಾರಣ ದಾವೆ ಹಾಕುವ ಪ್ರಸಂಗ ಬಂದಿತು ಎಂದು ಹೇಳುತ್ತಾರೆ. ಹಣಮಂತ ಮತ್ತು ಸಿದ್ದಪ್ಪ ಇವರೊಂದಿಗೆ ನನ್ನ ಸಂಬಂಧ ಚೆನ್ನಾಗಿ ಇಲ್ಲ. ನಿಮ್ಮ ಸಂಬಂಧ ಚೆನ್ನಾಗಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4.ಹಣಮಂತ ಇವರು ನಿಮ್ಮ ತಾಯಿಯವರ ಹೆಸರಿನಲ್ಲಿದ್ದ 3 ಏಕರೆ ಆಸ್ತಿ ಹೊರತುಪಡಿಸಿ ಉಳಿದ ಆಸ್ತಿ ಸ್ವತಃ ಗಳಿಸಿದ್ದಾರೆ ಎಂದರೆ ಸರಿಯಲ್ಲ. ಆ ಆಸ್ತಿಗಳಲ್ಲಿ ನಿಮಗಾಗಲೀ, ಉಳಿದ ಪಕ್ಷಗಾರರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 3 ಏಕರೆ ಆಸ್ತಿಯ ಆದಾಯದ ಮೂಲದಿಂದ ಉಳಿದ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದು ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ತಾಯಿಗೆ 3 ಏಕರೆ ಆಸ್ತಿ ಬಿಟ್ಟುಕೊಟ್ಟಾಗ ಅಲ್ಲಿ ಕಬ್ಬು ಬೆಳೆಯುತ್ತಿದ್ದರು. ಆ ರೀತಿ ಕಬ್ಬು ಬೆಳೆಯುತ್ತಿದ್ದರು ಎಂದು ತೋರಿಸಲು ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ತಾಯಿಯ ಹೆಸರಿಗೆ ಬಂದ 3 ಏಕರೆ ಆಸ್ತಿ ಒಣಬೇಸಾಯ ಜಮೀನು ಇದ್ದು ಅದರಲ್ಲಿ ಯಾವುದೇ ಬೆಳೆ ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಈಗಾಗಲೇ ವಿಭಾಗ ಆದ ಕಾರಣ ದಾವಾ ಆಸ್ತಿಗಳಲ್ಲಿ ನಿಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

5.ನನ್ನ ಮದುವೆ ಆಗಿ 25 ವರ್ಷಗಳಾಗಿವೆ. ನೀವು ನಿಮ್ಮ ಗಂಡನ ಮನೆಯಲ್ಲಿ ವಾಸಿಸುತ್ತಿದ್ದೀರಿ ಎಂದರೆ ನಾಗರಾಳದಲ್ಲಿ ಕಳೆದ 15 ವರ್ಷಗಳಿಂದ ವಾಸಿಸುತ್ತಿದ್ದೇನೆ ಎಂದು ಹೇಳುತ್ತಾರೆ. ಯಾರ ಮನೆಯಲ್ಲಿ ವಾಸಿಸುತ್ತೀರಿ ಎಂದರೆ ಪ್ರತಿವಾದಿ-8 ರವರ ಮನೆಯಲ್ಲಿ ವಾಸಿಸುತ್ತೇನೆ ಎಂದು ಹೇಳುತ್ತಾರೆ. ಸದರಿ ಮನೆ ಊರಿನಲ್ಲಿ ಇದೆ. ಅದು 3 ಗುಂಟೆ ಆಸ್ತಿ ಇದ್ದು ಅದರ ಸಂಖ್ಯೆ ಹೇಳಲು ಬರುವುದಿಲ್ಲ. ಈ ಪ್ರಕರಣದಲ್ಲಿ ಸದರಿ ಆಸ್ತಿಯನ್ನು ತೋರಿಸಿದ್ದೇನೆ. ಆ ಮನೆ ಆಸ್ತಿ ಸೇರಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹಣಮಂತ ಇವರ ಸ್ವಯಾರ್ಜಿತ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ತೀರಿಕೊಂಡಾಗಿನಿಂದ ಅವರಿಂದ ಬಂದ ಆಸ್ತಿಗಳ ಸ್ವಾಧೀನದಲ್ಲಿ ನಿಮ್ಮ ಸಹೋದರರಾದ ಹಣಮಂತ, ಸಿದ್ದಪ್ಪ ಮತ್ತು ಶಂಕ್ರೆಪ್ಪ ಅವರೇ ಇದ್ದಾರೆ ಎಂದರೆ ಸರಿ. ಪ್ರತಿವಾದಿ-2 ಮತ್ತು ಪ್ರತಿವಾದಿ-5 ಇವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿ-1, 8, 9 ರಿಂದ 14, 16, 18, 19 ಇವರು ಯಾವುದೇ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ